ಧಡ್...ಧಡ್... ಸದ್ದು ಕೇಳಿಸಿದಾಗ ರಸ್ತೆ ಉಬ್ಬು ಮೇಲೆ ನಿಧಾನವಾಗಿ ಚಲಿಸುತ್ತಿದ್ದ ಆಟೋರಿಕ್ಷಾ ನಿಂತೇ ಬಿಟ್ಟತು. ಆಟೋದಲ್ಲಿ ಹಿಂದೆ ಕುಳಿತು ಏನೋ ಯೋಚನೆಯಲ್ಲಿ ಮುಳುಗಿದ್ದ ನಿತ್ಯಾ ಕುಳಿತಲ್ಲಿಂದ ಎತ್ತರಕ್ಕೆ ಚಿಮ್ಮಿದಂತಾಗಿ ಮುಗ್ಗರಿಸಿ ಬಿದ್ದಳು. ಮುಂದೆ ಇದ್ದ ಕಂಬಿ ಹಣೆಗೆ ಬಡಿದುದರಿಂದ ನೋವಿನಿಂದ ಚೀರುವಂತಾಯಿತು. ಹಣೆಯನ್ನು ಗಟ್ಟಿಯಾಗಿ ಒತ್ತಿ ಹಿಡಿದುಕೊಂಡಳು.

'ಯಾವ್ನೋ ಹಿಂದಿನಿಂದ ಹೊಡೆದವ್ನೆ....' ಚಾಲಕ ರೇಗುತ್ತಾ ಹಿಂದಕ್ಕೆ ಧಾವಿಸಿದ. ಹಿಂದೆ ಬರುತ್ತಿದ್ದ ಟಾಟಾ ಸುಮೋ ಆಟೋದ ಹಿಂಭಾಗಕ್ಕೆ ಹೊಡೆದಿತ್ತು. ಆಟೋ ಚಾಲಕ ಸುಮೋದವನೊಡನೆ ಜಗಳ ಕಾಯಲಾರಂಭಿಸಿದ.

'ಏಯ್, ಕಣ್ಣು ಕಾಣಿಸಲ್ವೇನೋ ನಿಂಗೆ? ಮುಂದೆ ರಸ್ತೆ ಹಂಪ್ ಇದೆ ಅನ್ನೋ ಪರಿವೆ ಬೇಡ್ವೇ?'

ಸುಮೋದ ಚಾಲಕ ಏನೋ ಸಮಜಾಯಿಷಿ ಹೇಳುತ್ತಿದ್ದ. ನಿತ್ಯಾಳಿಗದು ಏನೆಂದು ಕೇಳಿಸಲಿಲ್ಲ.

'ಹಂಪ್ ಬಂದಾಗ ನಿಧಾನ ಮಾಡಬೇಕು ಅನ್ನೋ ಕಾಮನ್ ಸೆನ್ಸ್ ಇಲ್ವೇನಯ್ಯಾ ನಿಂಗೆ? ಸೀದಾ ಬಂದು ಈ ರೀತಿ ಹೊಡೆಯೋದಾ? ನೋಡು, ನನ್ನ ಗಾಡಿ ಹೇಗೆ ಜಖಂ ಆಗಿದೆ... ಗ್ಯಾರೇಜಿಗೆ ಹೋದರೆ ಐದು ಸಾವಿರನಾದರೂ ಬೇಕು ರಿಪೇರಿಗೆ....'

ಸ್ವಲ್ಪ ಹೊತ್ತಿನ ವಾಗ್ವಾದದ ನಂತರ ಸುಮೋ ಮುಂದಕ್ಕೋಡಿತು. ಆಟೋ ಚಾಲಕ ಕೂಡಾ ಗಾಡಿ ಸ್ಟಾರ್ಟ್ ಮಾಡಿದ.

'ಬೇಗ ಹೋಗಬೇಕು, ಅವನ ಹಿಂದೇನೇ. ಸ್ವಲ್ಪ ತನ್ನ ತಪ್ಪು ಅರ್ಥ ಮಾಡ್ಕೊಂಡವ್ನೆ. ಮುಂದಿನ ಸಿಗ್ನಲ್ ದಾಟಿ, ನಂತರ ಬರೋ ಕ್ರಾಸಲ್ಲಿ ನಿಲ್ಲಿಸ್ತಾನಂತೆ. ಪೋಲೀಸ್ ಕಂಪ್ಲೇಂಟ್ ಕೊಡೋದು ಬೇಡಾಂತ ಹೇಳವ್ನೆ. ಆದ್ರೂ ಹೆಂಗೇಳೋದು? ತಪ್ಪಿಸಿಕೊಂಡು ಗಾಡಿ ಓಡಿಸ್ಕೊಂಡು ಹೋಗ್ಬಿಟ್ರೆ? ದೊಡ್ಡ ಗಾಡಿ ಬೇರೆ...' ಆತಂಕದಿಂದ ಗೊಣಗುತ್ತಾ ಆದಷ್ಟು ವೇಗವಾಗಿ ಗಾಡಿ ಓಡಿಸತೊಡಗಿದ.

'ಸಿಗ್ನಲ್.....ಓ! ಸಿಗ್ನಲ್ ಕಳೆಯಿತಲ್ಲ! ನಾನಿಲ್ಲೇ ಇಳೀಬೇಕು. ನಿಲ್ಲಪ್ಪ ಗಾಡೀನ' ನಿತ್ಯಾ ಅವಸರಿಸಿದಳು.

ಚಾಲಕನ ಕಿವಿಗೆ ಅದು ಬೀಳಲಿಲ್ಲ. ಅವನು ವೇಗವಾಗಿ ಓಡಿಸುತ್ತಲೇ ಇದ್ದ. 'ನಾನು ಇಳೀಬೇಕಾದ ಜಾಗ ಕಳೆಯಿತು. ನಿಲ್ಲಿಸು ಒಮ್ಮೆ, ಇಳ್ಕೋತೀನಿ' ಜೋರಾಗಿ ಕೂಗಾಡಿದಾಗ, ಗಾಡಿ ನಿಲ್ಲಿಸಿದ ಚಾಲಕ 'ಇಳ್ಕೊಂಡು ಬಿಡ್ರೀ ಬೇಗ' ಎಂದು ತ್ವರೆ ಮಾಡಿದ.

